ಗುರು ಯಾರನ್ನು ಮುಖ್ಯರೆಂದು ಭಾವಿಸಿದ್ದಾರೊ ಶಿಷ್ಯರು ಕೂಡ ಅವರನ್ನು ಮುಖ್ಯ ಲೇಖಕರೆಂದು ಒಪ್ಪಿಕೊಳ್ಳಬೇಕು. ವಿದ್ಯಾರ್ಥಿಗಳ ಸ್ವತಂತ್ರ ವ್ಯಕ್ತಿತ್ವ ನಾಶವಾಗಿ ಗುರುಗಳ ಗಿಳಿವಿಂಡುಗಳಾಗಿಬಿಟ್ಟಿದ್ದಾರೆ. ಕೆಲವೊಮ್ಮೆ ಗುರುಗಳ ಪ್ರಚಾರ ಮಾಧ್ಯಮಗಳಾಗಿ ಬದಲಾಗಿದ್ದಾರೆ. ಪ್ರಚಾರದಿಂದ ಯಾರೂ ಬಹಳ ಕಾಲ ಉಳಿಯಲಾಗುವುದಿಲ್ಲ. ನನ್ನ ದೃಷ್ಟಿಯಲ್ಲಿ ನಾವು ಮಾಡುವ ಕೆಲಸಗಳೇ ನಮ್ಮ ಪ್ರಚಾರ. ಹೀಗಾಗಿ ಕೆಲಸದ ಬಗ್ಗೆ ಹೆಚ್ಚು ಆಸಕ್ತಿ ಬೆಳೆಸಿಕೊಳ್ಳಬೇಕು. ಎಷ್ಟೋ ಸಲ ಅಪರಿಚಿತರ ಪ್ರತಿಕ್ರಿಯೆ ವಿಮರ್ಶೆಗಳೇ ಹೆಚ್ಚು ಪ್ರಾಮಾಣಿಕವಾಗಿರುತ್ತವೆ. ಪರಿಚಿತರು ಒಂದೋ ಹೊಗಳುತ್ತಾರೆ ಅಥವಾ ಅಸೂಯೆಯ ಮಾತುಗಳನ್ನಾಡುತ್ತಾರೆ. ಇದೆಲ್ಲದರಿಂದ ದೂರವಿದ್ದು ಬರವಣಿಗೆಯಲ್ಲಿ ತೊಡಗಬೇಕು. ಬರೆಯುವ ಕೆಲಸವನ್ನು ಬಿಟ್ಟರೆ ನನಗೆ ಬೇರೆ ಕೆಲಸವಿಲ್ಲವೆಂದು ಹೇಳುವಂಥ ಪ್ರಾಧ್ಯಾಪಕರು ಎಷ್ಟು ಜನರಿದ್ದಾರೆ. ಆಂಟನ್ ಚೆಕಾವ್ ಒಮ್ಮೆ ಹೇಳಿದ್ದರು. ಇದನ್ನು ನಿರ್ಮಲ್ ವರ್ಮಾ ಒಂದೆಡೆ ಬರೆದಿದ್ದರು. ಲೇಖಕರ ಅತ್ಯಂತ ಕೆಟ್ಟ ಮನಸ್ಥಿತಿ ಎಂದರೆ ತಮ್ಮ ವಿದ್ಯಾರ್ಥಿಗಳಿಂದ ಪ್ರಚಾರ ಗಿಟ್ಟಿಸಿಕೊಳ್ಳುವುದು. ಸದಾ ಒಂದಿಲ್ಲೊಂದು ಕಾರಣಕ್ಕೆ ಪ್ರಚಾರ ಬಯಸುವುದು. ಇನ್ನು ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವುದೇನು?

ನೀವು ವಿಮರ್ಶೆಯಲ್ಲಿ ತೊಡುಗುವುದೆಂದರೆ ಪ್ರಾಚೀನ ಮತ್ತು ಆಧುನಿಕ ಓದುಗಳ ನಡುವೆ ಒಂದು ಸಮನ್ವಯ ಸಾಧಿಸುವುದು. ಕೇವಲ ಭಾರತದ್ದು ಮಾತ್ರವಲ್ಲ, ಜಗತ್ತಿನ ಸಾಹಿತ್ಯವನ್ನೂ ಓದಬೇಕಾಗುತ್ತದೆ. ಇದಕ್ಕಾಗಿ ನಿಮಗೆ ಸಮಯಬೇಕು, ಗ್ರಂಥಾಲಯದ ಸೌಲಭ್ಯಬೇಕು, ಚರ್ಚೆ ಬೇಕು, ಕೆಲ ಅನುಕೂಲಗಳ ಅಗತ್ಯವಿದೆ. ಉಳಿದ ಪ್ರಕಾರಗಳಿಗೆ ಇದು ಅಷ್ಟಾಗಿ ಅನ್ವಯಿಸುವುದಿಲ್ಲ. ಆದರೆ ವಿಮರ್ಶೆ ಕೊಂಚ ಬೇರೆ ಕೆಲಸ. ಇದರ ಹೊರಗೂ ಕೆಲವರು ಸಿಗಬಹುದು. ಆದರೆ ಈ ಕಾಲದಲ್ಲಿ ಕಷ್ಟ. ಆದರೆ ಈ ಎಲ್ಲಾ ಸೌಲಭ್ಯಗಳಿದ್ದೂ ವಿಶ್ವವಿದ್ಯಾಲಯಗಳಿಗೆ ಮಹತ್ವದ ವಿಮರ್ಶೆಯನ್ನು ರೂಪಿಸಲು ಯಾಕೆ ಸಾಧ್ಯವಾಗುತ್ತಿಲ್ಲ. ಇದು ನನ್ನ ಭಯ ಮತ್ತು ದುಃಖ. ಬೇರೆ ಭಾಷೆಯ ಬಗೆಗೆ ನನಗೆ ಗೊತ್ತಿಲ್ಲ. ಆದರೆ ಹಿಂದಿಯಲ್ಲಿ ಕಳೆದ ಒಂದು ದಶಕದಿಂದ ಗಂಭೀರ



ಸಮಸ್ಯೆ ತಲೆದೋರಿದೆ ಅನ್ನಿಸ್ತಿದೆ. ತರಗತಿಯ ಪಾಠಗಳು ಗಂಭೀರತೆ ಕಳೆದುಕೊಳ್ಳುತ್ತಿವೆ. ಸಾಹಿತ್ಯವನ್ನು ಪ್ಯಾಶನೇಟ್ ಆಗಿ ಕಲಿಸುವವರ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ. ಸಾಹಿತ್ಯದ ಪ್ರತಿಯೊಂದು ಸೂಕ್ಷ್ಮವಾದ ಎಳೆಗಳನ್ನು ಹಿಡಿದು ಮಾತನಾಡುವವರ ಸಂಖ್ಯೆ ಕೂಡ ಕಡಿಮೆಯಾಗ್ತಿದೆ. ಸಾಹಿತ್ಯದ ಪಾಠಕ್ಕಿಂತ ಅವೆಲ್ಲ ಅರ್ಥವಿಲ್ಲದ ಸಮಾಜಶಾಸ್ತ್ರೀಯ ಪಾಠಗಳಾಗಿಬಿಟ್ಟಿವೆ. ಅಂದ್ರೆ ಅವರ್‍ಯಾರೂ ಸಮಾಜಶಾಸ್ತ್ರಜ್ಞರಲ್ಲ. ಸಮಾಜಶಾಸ್ತ್ರದ ಸೂಕ್ಷ್ಮಗಳ ಸರಿಯಾದ ತಿಳಿವಳಿಕೆಯಿಲ್ಲ. ಆದರೆ ಸಮಾಜಶಾಸ್ತ್ರದ, ಅರ್ಥಶಾಸ್ತ್ರದ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುತ್ತಾರೆ. ಒಂದುವೇಳೆ ಅಪಾರ ಸಿದ್ಧತೆಯಿಂದ ಮಾತನಾಡಿದರೆ ತೊಂದರೆಯಿಲ್ಲ. ಆದರೆ ಹಿಂದಿಯಲ್ಲಿ ಇಂಥ ಸಿದ್ಧತೆ ನಾನು ಗಮನಿಸಿದಂತೆ ತುಂಬಾ ಕಡಿಮೆ. ಸಾಹಿತ್ಯದ ಅಭಿರುಚಿಯನ್ನು ಹೆಚ್ಚಿಸುವ ಪ್ರಾಧ್ಯಾಪಕರ ಸಂಖ್ಯೆ ಎಷ್ಟಿದೆ? ಹಿಂದೆಲ್ಲ ಹಜಾರಿಪ್ರಸಾದ್ ದ್ವಿವೇದಿ, ರಾಮಚಂದ್ರ ಶುಕ್ಲ್, ರಾಮವಿಲಾಸ್ ಶರ್ಮಾ, ನಾಮವರ್ ಸಿಂಗ್ ಎಷ್ಟೆಲ್ಲಾ ದಿಗ್ಗಜರಿದ್ದರು. ಆದರೆ ಈಗ ನೋಡಿ ಏನಾಗಿದೆ. ವಿದ್ಯಾರ್ಥಿಗಳಲ್ಲಿ ಒಂದು ಸಣ್ಣ ಸಾಹಿತ್ಯಾಭಿರುಚಿ ಹುಟ್ಟಿಸುವ ಸಾಮರ್ಥ್ಯವಿಲ್ಲದ ವಿಭಾಗಗಳು ಮಹತ್ವದ ಸಾಹಿತ್ಯ ವಿಮರ್ಶೆ ಕೈಗೊಳ್ಳಲು ಸಾಧ್ಯವೆ? ಇದು ಬರೀ ವಿಮರ್ಶೆಯ ಪ್ರಶ್ನೆ ಮಾತ್ರವಲ್ಲ. ಸಾಹಿತ್ಯದ ಅಭಿರುಚಿಯ ಪ್ರಶ್ನೆ ಕೂಡ ಹೌದು.